# ಸ್ವಾಮಿ ವಿವೇಕಾನಂದರ ಯೋಗಸಮನ್ವಯ

**ಸ್ವಾಮಿ ರಾಘವೇಶಾನಂದ**

**ಸ್ವಾಮಿ ವಿವೇಕಾನಂದರು ಕನಸುಕಂಡಿದ್ದ ವಿಶ್ವಧರ್ಮದ ಒಂದು ಮುಖ್ಯ ಅಂಶ ಯೋಗಸಮನ್ವಯ. ಅದರ ಕಿರು ಪರಿಚಯವನ್ನು ನೀಡಿರುವ ಸ್ವಾಮಿ ರಾಘವೇಶಾನಂದಜಿಯವರು ಬೆಂಗಳೂರಿನ ಅಲಸೂರಿನಲ್ಲಿರುವ ವಿವೇಕಾನಂದ ಆಶ್ರಮದ ಅಧ್ಯಕ್ಷರಾಗಿರುವರು.**

## ಎಲ್ಲ ಯೋಗಗಳ ಗುರಿ ಒಂದೆ

**ಯೋ**ಗಗಳ ಸಂಬಂಧವಾಗಿ ಸ್ವಾಮಿ ವಿವೇಕಾನಂದರು ತಮ್ಮ ರಾಜಯೋಗದಲ್ಲಿ ಒಂದು ಅದ್ಭುತವಾದ ವಿಚಾರವನ್ನು ತಿಳಿಸಿದ್ದಾರೆ. "ಪ್ರತಿ ಆತ್ಮನಲ್ಲಿಯೂ ದಿವ್ಯತೆ ಹುದುಗಿರುವುದು. ಈ ಸುಪ್ತವಾದ ದಿವ್ಯತೆಯನ್ನು ಬಾಹ್ಯ ಮತ್ತು ಆಂತರಿಕ ಪ್ರಕೃತಿಯ ನಿಗ್ರಹದಿಂದ ವ್ಯಕ್ತಪಡಿಸುವುದೇ ಜೀವನದ ಗುರಿ. ಇದನ್ನು ಕರ್ಮಯೋಗದಿಂದಾಗಲಿ, ಜ್ಞಾನಯೋಗದಿಂದಾಗಲಿ ಭಕ್ತಿಯೋಗದಿಂದಾಗಲಿ, ರಾಜಯೋಗದಿಂದಾಗಲಿ, ಯಾವುದಾದರೂ ಒಂದು ಮಾರ್ಗದಿಂದ ಅಥವಾ ಎಲ್ಲ ಮಾರ್ಗಗಳ ಸಂಯೋಗದಿಂದ ಆಗಲಿ ಸಾಧಿಸಿ ಮುಕ್ತರಾಗಿ. ಇದೇ ಧರ್ಮದ ಸರ್ವಸ್ವ. ಸಿದ್ಧಾಂತ, ನಂಬಿಕೆ, ಬಾಹ್ಯಾಚಾರ, ಪವಿತ್ರಗ್ರಂಥ, ದೇವಸ್ಥಾನ, ವಿಗ್ರಹ—ಇವೆಲ್ಲ ಗೌಣ."

ಈ ಹೇಳಿಕೆಯಿಂದ ಮೂರು ವಿಷಯಗಳು ಸ್ಪಷ್ಟವಾಗುತ್ತವೆ: (೧) ಎಲ್ಲ ಯೋಗಗಳು ಒಂದೇ ಗುರಿಯನ್ನು ಮುಟ್ಟುತ್ತವೆ, (೨) ಯಾವುದಾದರೂ ಒಂದು ಯೋಗವನ್ನು ಅನುಷ್ಠಾನಕ್ಕೆ ತಂದು ಅದರಿಂದ ಗುರಿ ಸೇರುವುದು, (೩) ಎಲ್ಲ ಯೋಗಗಳನ್ನು ಸಮನ್ವಯಗೊಳಿಸಿ, ಅವುಗಳ ಸಂಯೋಗದಿಂದಲೂ ಗುರಿಸೇರಬಹುದು.

ಸ್ವಾಮಿ ವಿವೇಕಾನಂದರ ಮೇಲಿನ ಹೇಳಿಕೆ ಯೋಗಸಮನ್ವಯಾಚಾರ್ಯನಾದ ಶ್ರೀಕೃಷ್ಣನ **ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್**—ಅಂದರೆ "ಯಾರು ಹೇಗೆ ನನ್ನನ್ನು ಆಶ್ರಯಿಸುತ್ತಾರೋ ಅವರನ್ನು ಹಾಗೆಯೇ ನಾನು ಅನುಗ್ರಹಿಸುತ್ತೇನೆ " ಎಂಬ ವಾಣಿಯನ್ನು ಪ್ರತಿಬಿಂಬಿಸುತ್ತದೆ. ೧೯ನೇ ಶತಮಾನದಲ್ಲಿ ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ಅವತಾರವೆತ್ತಿದುದು ಈ ಯೋಗಸಮನ್ವಯವನ್ನು ತಮ್ಮ ಜೀವನದಲ್ಲಿ ಸಾಧನೆ ಮಾಡಿ, ಸಿದ್ಧಿ ಪಡೆದು ಜಗತ್ತಿಗೆ ಮಹಾಸಂದೇಶವಾಗಿ ಕೊಡಲು. ಬಾಲ್ಯದಿಂದ ಹಿಡಿದು ತಮ್ಮ ಜೀವನದ ಕೊನೆಯವರೆಗೂ ಈ ಯೋಗಸಮನ್ವಯ ಸ್ವಾಮಿ ವಿವೇಕಾನಂದರ ಜೀವನದಲ್ಲಿ ಸಹಜವಾಗಿ ಅರಳುವುದನ್ನು ನಾವು ಕಾಣಬಹುದು.

## "ನೀನು ಧ್ಯಾನಸಿದ್ಧ"

ಹಲವಾರು ಯೋಗಿಗಳಿಗೆ ಧ್ಯಾನ ಪರಿಪಕ್ವವಾದಾಗ ಜ್ಯೋತಿ ದರ್ಶನವಾಗುತ್ತದೆ. ವಿವೇಕಾನಂದರು ಬಾಲ್ಯದಿಂದಲೇ ಮಲಗುವ



ಸ್ವಾಮಿ ವಿವೇಕಾನಂದರು ಎಲ್ಲ ಮಾನವ ಶಕ್ತಿಯ ಸಮನ್ವಯದ ಮೂರ್ತರೂಪರಾಗಿದ್ದರು.
***–ರೋಮ್ಯ ರೋಲಾ***

ಮುನ್ನ ಪ್ರತಿದಿನ ಅದನ್ನು ಕಾಣುತ್ತಿದ್ದರು. ಅವರು ಶ್ರೀರಾಮಕೃಷ್ಣರ ಬಳಿಗೆ ಬಂದಾಗ ಶ್ರೀರಾಮಕೃಷ್ಣರು, "ನೀನು ಧ್ಯಾನ ಮಾಡುವಾಗ ಜ್ಯೋತಿಯನ್ನು ದರ್ಶಿಸುತ್ತೀಯಾ?" ಎಂದು ಕೇಳಿದಾಗ ಸ್ವಾಮೀಜಿ, "ಹೌದು" ಎಂದರು. ಶ್ರೀರಾಮಕೃಷ್ಣರು ಅವರನ್ನು "ನೀನು ಧ್ಯಾನಸಿದ್ಧ" ಎಂದರು.

ಎಲ್ಲ ಯೋಗಗಳಲ್ಲೂ ಮುಖ್ಯವಾದ ಅಂಗ ಧ್ಯಾನ. ಧ್ಯಾನವೆಂದರೆ ಒಂದು ವಸ್ತುವಿನ ಮೇಲೆ ಮನಸ್ಸನ್ನು ಸಂಪೂರ್ಣವಾಗಿ ಕೇಂದ್ರೀಕರಿಸುವುದು. ಭಕ್ತಿಯೋಗದಲ್ಲಿ ಭಕ್ತ ತನ್ನ ಹೃದಯದಲ್ಲಿ ಇಷ್ಟದೇವತೆಯನ್ನು ಕುರಿತು ಧ್ಯಾನ ಮಾಡುತ್ತಾನೆ. ಮನಸ್ಸು ಯಾವಾಗ ತೈಲಧಾರೆಯಂತೆ ಆ ಭಗವಂತನ ಧ್ಯಾನದಲ್ಲೇ ನಿರತವಾಗುತ್ತದೋ ಆಗ ಅವನ ಹೃದಯ ಆನಂದದಿಂದ ತುಂಬಿ ಇಷ್ಟದೇವತೆಯ ದರ್ಶನ ಪಡೆಯುತ್ತಾನೆ. ಜ್ಞಾನಯೋಗವನ್ನು ಅನುಷ್ಠಾನ ಮಾಡುವವರು ನಿತ್ಯಾನಿತ್ಯ ವಸ್ತುವಿವೇಕದಲ್ಲಿ ಜಯಶೀಲರಾದಾಗ ಧ್ಯಾನ ಮುಖ್ಯ ಸಾಧನೆಯಾಗುತ್ತದೆ. ಉಪನಿಷತ್ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು ಎಂದು ವಿಧಿಸುತ್ತದೆ. ಮುಂದಿನ ವಾಕ್ಯದಲ್ಲೇ ಆ ಸಾಕ್ಷಾತ್ಕಾರಕ್ಕೆ ಸಾಧನರೂಪವಾಗಿ, **ಶ್ರೋತವ್ಯೋ, ಮನ್ತವ್ಯೋ ನಿದಿಧ್ಯಾಸಿತವ್ಯಃ** (ಬೃ.ಉ. ೪.೫/೬) ಎಂದು ಶ್ರವಣ

ಮನನ ಹಾಗೂ ನಿದಿಧ್ಯಾಸನ ಅಥವಾ ಧ್ಯಾನವನ್ನು ವಿಧಿಸುತ್ತದೆ. ರಾಜಯೋಗದಲ್ಲಿ ಏನೆಯ ಹಂತ ಅಂದರೆ ಸಮಾಧಿಗೆ ಮುಂಚಿನ ಹಂತವಾಗಿ ಧ್ಯಾನವನ್ನು ವಿಧಿಸಿದೆ. ಈ ವಿಧವಾದ ಧ್ಯಾನಕ್ಕೆ ಬೇಕಾದ ಏಕಾಗ್ರತೆಯನ್ನು ಗಳಿಸಿಕೊಳ್ಳಲು ಸಾಧಾರಣ ಮನುಷ್ಯನಿಗೆ ಒಂದು ಜನ್ಮ ಅಥವಾ ಹಲವು ಜನ್ಮಗಳೇ ಹಿಡಿಯಬಹುದು. ಆದರೆ ಸ್ವಾಮಿ ವಿವೇಕಾನಂದರಿಗೆ ಬಾಲ್ಯದಿಂದಲೇ ಇದು ಕರಗತ ವಾಗಿರುವುದನ್ನು ಕಾಣಬಹುದು. ಅದಕ್ಕೇ ಶ್ರೀರಾಮಕೃಷ್ಣರು ಅವ ರನ್ನು ನಿತ್ಯಸಿದ್ಧರು ಎಂದು ಹೊಗಳಿದರು.

### ವಿವೇಕಾನಂದರ ಜೀವನವೇ ಯೋಗಸಮನ್ವಯ.

ಅವರ ಜೀವನವನ್ನು ಓದಿದಾಗ ಅವರು ಶ್ರೀರಾಮಕೃಷ್ಣರ ಮಾರ್ಗದರ್ಶನದ ಮೂಲಕ ಮೂರ್ತಿಯಲ್ಲಿ ಭಗವಂತನ ಆವಿ ರ್ಭಾವವನ್ನು ಅನುಭವಿಸುವುದರಿಂದ ಹಿಡಿದು ನಿರ್ವಿಕಲ್ಪ ಸಮಾಧಿ ಯವರೆಗೆ ಎಲ್ಲ ಸಾಕ್ಷಾತ್ಕಾರವನ್ನೂ ಮಾಡಿಕೊಂಡಿರುವುದನ್ನು ಕಾಣು ತ್ತೇವೆ. ಇದರ ಫಲವಾಗಿ ತಮ್ಮ ಗುರುಗಳಂತೆ ಅವರೂ ಎಲ್ಲ ಯೋಗಗಳೂ ಒಂದೇ ಗುರಿ ಸೇರುತ್ತವೆ, ಅಷ್ಟೇ ಅಲ್ಲ, ಒಬ್ಬ ವ್ಯಕ್ತಿ ಎಲ್ಲ ಯೋಗಗಳನ್ನು ಬೇರೆ ಬೇರೆಯಾಗಿಯೊ ಅಥವಾ ಸಮನ್ವಯವಾಗಿಯೊ ಆಚರಣೆಗೆ ತರಬಹುದು ಎಂದೂ ಸಾಕ್ಷಾ ತ್ಕಾರಿಸಿಕೊಂಡಿದ್ದರು. ವಿವೇಕಾನಂದರ ಜೀವನವೇ ಒಂದು ಯೋಗ ಸಮನ್ವಯವಾಗಿತ್ತು. ಶ್ರೀರಾಮಕೃಷ್ಣರು ಒಮ್ಮೆ ಹೇಳುತ್ತಾರೆ, "ನರೇಂದ್ರ ಹೊರಗೆಲ್ಲ ಜ್ಞಾನದಿಂದ ತುಂಬಿದ್ದಾನೆ. ಆದರೆ ಒಳಗಡೆ ಭಕ್ತಿ ತುಂಬಿದೆ." ಜ್ಞಾನ ಮತ್ತು ಭಕ್ತಿಗಳಿಂದ ಪರಿಪೂರ್ಣ ರಾಗಿದ್ದ ಅವರನ್ನು ಶ್ರೀರಾಮಕೃಷ್ಣರು ಕರ್ಮಯೋಗಕ್ಕೂ ಸಿದ್ಧ ಗೊಳಿಸಿದರು. ಜ್ಞಾನಯೋಗದ ಪರಾಕಾಷ್ಠೆಯಾದ ನಿರ್ವಿಕಲ್ಪ ಸಮಾಧಿಯನ್ನು ವಿವೇಕಾನಂದರು ಪಡೆದಾಗ ಶ್ರೀರಾಮಕೃಷ್ಣರು ಅವರನ್ನು ಕರೆದು ಹೇಳಿದರು : "ಇಂದು ನೀನು ಇಚ್ಛಿಸುತ್ತಿದ್ದ ನಿರ್ವಿಕಲ್ಪ ಸಮಾಧಿಯನ್ನೂ ಪಡೆದಿರುವೆ. ಆದರೆ ಈ ಕೋಶಾ ಗಾರಕ್ಕೆ ಬೀಗ ಹಾಕಿದ್ದೇನೆ. ಇದರ ಕೀಲಿಕೈ ನನ್ನ ಬಳಿ ಇರುವುದು. ನೀನು ಜಗನ್ಮಾತೆಯ ಕೆಲಸವನ್ನು ಈ ಲೋಕದಲ್ಲಿ ಮಾಡಬೇಕಾ ಗಿದೆ. ಅದು ಮುಗಿದ ನಂತರ ಮತ್ತೆ ತೆರೆಯುತ್ತೇನೆ." ಅವರು ಕರ್ಮಯೋಗದ ರಹಸ್ಯವನ್ನು ನರೇಂದ್ರನಿಗೆ "ಜೀವೇ ಶಿವ ಸೇವಾ" ಎಂಬ ಒಂದೇ ಸೂತ್ರದಿಂದ ವಿವರಿಸಿದರು. ಸ್ವಾಮಿ ವಿವೇಕಾ ನಂದರ ಭಾವೀಜೀವನಕ್ಕೆ ಅದು ಒಂದು ಮಂತ್ರವಾಗಿ ಪರಿಣಮಿಸಿ ಮುಂದೆ ಅದರ ಆಧಾರದ ಮೇಲೆ **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ** ಎಂಬ ಆದರ್ಶದ ಮೇಲೆ ಶ್ರೀರಾಮಕೃಷ್ಣ ಸಂಸ್ಥೆ ಯನ್ನು ಸ್ಥಾಪಿಸಿದರು.

ಶ್ರೀರಾಮಕೃಷ್ಣರ ಕೊನೆಯ ದಿನಗಳಲ್ಲಿ ಅವರು ವಾಸಿಸುತ್ತಿದ್ದ ಕಾಶೀಪುರ ತೋಟ ಸಾಧಕರಿಗೆ ಒಂದು ಯೋಗಶಾಲೆಯಾಗಿತ್ತು. ಎಲ್ಲ ಯೋಗಗಳಲ್ಲೂ ಹೇಳುವ ಗುರುಸೇವೆ, ಈ ಶಿಷ್ಯರುಗಳಿಗೆ ಸಾಧನೆಯ ಒಂದು ಅಂಗವಾಗಿತ್ತು. ಜ್ಞಾನಧ್ಯಾನ, ಭಕ್ತಿಧ್ಯಾನ, ರಾಜಯೋಗಧ್ಯಾನ, ಇವೆಲ್ಲವೂ ಸತತವಾಗಿ ಸಾಗುತ್ತಿತ್ತು. ಒಮ್ಮೆ ವಿವೇಕಾನಂದರು ತೀವ್ರಧ್ಯಾನದಲ್ಲಿ ತೊಡಗಿದ್ದರು. ಇದ್ದಕ್ಕಿದ್ದ ಹಾಗೆ ಅವರ ಹೃದಯದಲ್ಲಿ ಏನೋ ಸಂಚರಿಸಿದಂತಾಯಿತು. ನಂತರ ಅದರ ಬಗ್ಗೆ ತಮ್ಮ ಸ್ನೇಹಿತರಿಗೆ ಹೇಳುತ್ತಾ "ಕುಂಡಲಿನಿ ಜಾಗೃತ ವಾಗುವುದನ್ನು ದರ್ಶಿಸಿದೆ. ಇಡಾ ಹಾಗೂ ಪಿಂಗಳದ ನರಗಳನ್ನು ಸ್ಪಷ್ಟವಾಗಿ ಕಂಡೆ" ಎಂದು ಹೇಳಿದರು. ಅಂದರೆ ರಾಜಯೋಗದ ಪರಿಪೂರ್ಣತೆಯನ್ನು ತಮ್ಮಲ್ಲಿ ಸಾಕ್ಷಾತ್ಕರಿಸಿಕೊಂಡಿದ್ದರು.

> ಎಲ್ಲರ ಸ್ವೀಕಾರಕ್ಕೂ ಯೋಗ್ಯವಾಗಿರುವಂತಹ ಧರ್ಮ ವನ್ನು ನಾನು ಪ್ರಚಾರ ಮಾಡಬೇಕೆಂದಿರುವೆನು. ಅದು **ಸಮಾನವಾಗಿ ತಾತ್ತ್ವಿಕವಾಗಿರಬೇಕು, ಭಕ್ತಿಯುಕ್ತವಾಗಿರ ಬೇಕು, ಯೋಗಸಹಿತವಾಗಿರಬೇಕು ಮತ್ತು ಕ್ರಿಯೋತ್ತೇಜಕ ವಾಗಿರಬೇಕು.** – ಸ್ವಾಮಿ ವಿವೇಕಾನಂದ

### ಯೋಗಸಮನ್ವಯದ ಆವಶ್ಯಕತೆ

ಹೀಗೆ ಎಲ್ಲ ಯೋಗಗಳ ಪೂರ್ಣ ಸಾಕ್ಷಾತ್ಕಾರವನ್ನು ಪಡೆದ ಸ್ವಾಮಿ ವಿವೇಕಾನಂದರು ತಮ್ಮ ಅನುಭವದ ಆಧಾರದ ಮೇಲೆ ಯೋಗಗಳ ಸಮನ್ವಯವನ್ನು ಜಗತ್ತಿಗೆ ಬೋಧಿಸಿದರು. ಸ್ವಾಮಿ ವಿವೇಕಾನಂದರು ಹೇಳುವಂತೆ, ಎಲ್ಲ ಯೋಗಗಳ ಭಾವನೆಗಳು ಪ್ರತಿಯೊಬ್ಬನ ಮನಸ್ಸಿನಲ್ಲಿಯೂ ಇರುತ್ತವೆ. ಆದರೆ ಯಾವ ಯೋಗವು ಪ್ರಬಲವಾಗಿ ಅವನ ಮನಸ್ಸಿನ ಮೇಲೆ ಪ್ರಭಾವವನ್ನು ಬೀರುವುದೋ ಅದಕ್ಕೆ ಪ್ರಾಮುಖ್ಯ ಕೊಟ್ಟು ತನ್ನ ಜೀವನದಲ್ಲಿ ಸಾಧಿಸಲು ಪ್ರಯತ್ನಿಸುತ್ತಾನೆ. ಇದರಿಂದ ಅರ್ಥವಾಗುವುದೇನೆಂದರೆ ಎಲ್ಲ ಯೋಗಗಳೂ ಪರಸ್ಪರ ಪೂರಕವೇ ಹೊರತು ವಿರುದ್ಧ ವಾದುವಲ್ಲ.

ಯೋಗಗಳ ಸಮನ್ವಯವೆಂದರೆ ನಾವು ಮೂರು ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು :

**(೧) ಪ್ರತಿ ಯೋಗದ ಸ್ವಾಯತ್ತತೆಯನ್ನು ಗುರುತಿಸಬೇಕು,**

**(೨) ನಮ್ಮಲ್ಲಿ ಯಾವ ಯೋಗದ ಭಾವನೆಗಳು ಪ್ರಬಲ ವಾಗಿದೆಯೋ ಆ ಯೋಗದಲ್ಲಿ ಮುಂದುವರೆಯಲು ಯತ್ನಿಸಬೇಕು,**

**(೩) ಉಳಿದ ಯೋಗಗಳನ್ನು ಇದಕ್ಕೆ ಪೂರಕವಾಗಿ ಉಪ ಯೋಗಿಸಿಕೊಳ್ಳಬೇಕು.**

ಪ್ರತಿಯೊಂದು ಯೋಗವೂ ಮಾನವನ ವಿವಿಧ ಮನೋ ವೃತ್ತಿಗಳನ್ನು ಪ್ರತಿನಿಧಿಸುತ್ತದೆಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯವಾಗಿತ್ತು. ಜ್ಞಾನಯೋಗವು ವಿಚಾರಶಕ್ತಿಗೂ ಭಕ್ತಿ ಯೋಗವು ಭಾವನಾಶಕ್ತಿಗೂ ಕರ್ಮಯೋಗವು ಇಚ್ಛಾಶಕ್ತಿಗೂ ಮತ್ತು ರಾಜಯೋಗವು ಏಕಾಗ್ರತಾ ಶಕ್ತಿಗೂ ಸಂಬಂಧಿಸಿದುದು. ಆದ್ದರಿಂದ ಅವರ ದೃಷ್ಟಿಯಲ್ಲಿ ಯೋಗಸಮನ್ವಯ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಆವಶ್ಯಕ. ಸ್ವಾಮಿ ವಿವೇಕಾನಂದರು ಈ ಸಮನ್ವಯ ತತ್ತ್ವವನ್ನು ಸಾರಿದುದರ ಉದ್ದೇಶ ಮನುಷ್ಯನನ್ನು

ತಮಸ್ಸಿನಿಂದಲೂ ಒಣ ವೇದಾಂತದ ಚರ್ಚೆಯಿಂದಲೂ ಮುಕ್ತಗೊಳಿಸಿ ವೀರಪುರುಷನನ್ನಾಗಿ ಮಾಡುವುದು. ಇಂತಹ ಒಂದು ಧರ್ಮದ ಆಚರಣೆ ಪ್ರತಿಯೊಬ್ಬ ಮನುಷ್ಯನಿಗೂ ಅತ್ಯಾವಶ್ಯಕ ಎಂಬುದನ್ನು ಕಂಡುಹಿಡಿದಿದ್ದರು. ಇಂತಹ ಧರ್ಮದ ಆಚರಣೆಗೆ ಬೇಕಾದ ಸಲಕರಣೆಗಳೇನು?

(೧) ದೃಢವಾದ ಮನಸ್ಸು. ಸಾಧನೆಯ ಪಥದಲ್ಲಿ ಪರ್ವತದಂತಹ ಕಷ್ಟಗಳು ಬಂದರೂ ಧೃತಿಗೆಡದೆ ಕೆಚ್ಚೆದೆಯಿಂದ ಎದುರಿಸುವ ಶಕ್ತಿಯುಳ್ಳ ಮನಸ್ಸು. ಇಂತಹ ಒಂದು ಮನಶ್ಶಕ್ತಿಯನ್ನು ನಾವು ಸ್ವಾಮಿ ವಿವೇಕಾನಂದರ ಜೀವನವಿಡೀ ಕಾಣುತ್ತೇವೆ.

(೨) ಯಾವುದೇ ಯೋಗವನ್ನು ಅಭ್ಯಾಸ ಮಾಡಲಿ, ಅದರ ಗುರಿ ಸೇರುವವರೆಗೆ ಬಿಡುವುದಿಲ್ಲ ಎಂಬ ಆತ್ಮಶ್ರದ್ಧೆಯನ್ನು ಬೆಳೆಸಿಕೊಳ್ಳಬೇಕು.

(೩) ನಮ್ಮ ಅಂತರಾಳದಲ್ಲಿ ಸುಪ್ತವಾಗಿರುವ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು, ಅಸಾಧ್ಯವಾದ ಬಾಗಿಲುಗಳನ್ನು ತೆರೆಸುವಂತಹ ಭಗವತ್ಪ್ರೇಮ.

(೪) ಎಲ್ಲವನ್ನು ಸಾಧಿಸಲು ಬೇಕಾದ ಉಕ್ಕಿನ ನರಗಳು ಹಾಗೂ ಕಬ್ಬಿಣದ ಮಾಂಸಖಂಡವಿರುವ ಶರೀರ.

## ಭಕ್ತಿಜ್ಞಾನಗಳ ಸಾಮರಸ್ಯ

ಸ್ವಾಮಿ ವಿವೇಕಾನಂದರು 'ನನ್ನ ಸಮರನೀತಿ' ಎಂಬ ಪ್ರವಚನದಲ್ಲಿ ಕೂಗಿ ಹೇಳುತ್ತಾರೆ, "ಮೊದಲು ಹೃದಯದಿಂದ ಮರುಗು. ಬುದ್ಧಿಯಲ್ಲಿ ಮತ್ತು ವಿಚಾರಶಕ್ತಿಯಲ್ಲಿ ಏನಿದೆ? ಕೆಲವು ಹೆಜ್ಜೆಗಳು ಹೋಗಿ ಅವು ನಿಲ್ಲುವುವು. ಸ್ಫೂರ್ತಿ ಬರುವುದು ಹೃದಯದಿಂದ. ಪ್ರೇಮ ಅಸಾಧ್ಯವಾದ ಬಾಗಿಲುಗಳನ್ನು ತೆರೆಯುವುದು" (ಕೃ.ಶ್ರೀ. ೩.೧೦೫). ಇದು ಸರಳವಾದ ಆದರೆ ಶಕ್ತಿಯುತವಾದ ಭಕ್ತಿಯೋಗ. ಇದು ಕ್ರಿಯೆಯಲ್ಲಿ ಭಕ್ತಿಯೋಗ. ಭಕ್ತಿಯೋಗದ ಸಾರವನ್ನೂ, ಅದನ್ನು ಅನುಷ್ಠಾನಕ್ಕೆ ತರುವ ವಿಧಾನವನ್ನೂ ಕೆಲವೇ ಮಾತುಗಳಲ್ಲಿ ವಿವೇಕಾನಂದರು ವಿವರಿಸುತ್ತಾರೆ: "ಪರಾಪ್ರೇಮದ ವಿಷಯವನ್ನು ತಿಳಿಸುವುದೇ ಭಕ್ತಿಯೋಗ. ಅದನ್ನು ಯಾವ ರೀತಿ ತಿರುಗಿಸಬೇಕು, ಹೇಗೆ ಉಪಯೋಗಿಸಬೇಕು, ಅದಕ್ಕೆ ಹೇಗೆ ಬೇರೊಂದು ಗುರಿಯನ್ನು ಕೊಟ್ಟು, ಶ್ರೇಷ್ಠತಮವಾದ ಅತ್ಯದ್ಭುತವಾದ ಫಲಗಳನ್ನು ಪಡೆಯುವುದು ಮತ್ತು ಆಧ್ಯಾತ್ಮಿಕ ಆನಂದಕ್ಕೆ ಅದು ಹೇಗೆ ನಮ್ಮನ್ನು ಕರೆದುಕೊಂಡು ಹೋಗುವಂತೆ ಮಾಡುವುದು ಎಂಬುದನ್ನು ಭಕ್ತಿಯೋಗ ತೋರಿಸುವುದು. ಭಕ್ತಿಯೋಗ 'ಬಿಡು' ಎನ್ನುವುದಿಲ್ಲ. 'ಪ್ರೀತಿಸು, ಅತ್ಯುತ್ತಮವಾದುದನ್ನು ಪ್ರೀತಿಸು' ಎನ್ನುವುದು" (ಕೃ.ಶ್ರೀ. ೧:೨೨೩).

ಪ್ರೇಮವು ದೃಢವಾದ ಮನಶ್ಶಕ್ತಿಯೊಡನೆ ಕೂಡಿರಬೇಕು. ಎಂತಹ ಮನಶ್ಶಕ್ತಿಯೆಂದರೆ ಪರ್ವತಾಕಾರದ ಅಡಚಣೆಗಳು ಬಂದರೂ ಹಿಂದೆಗೆಯದೆ ಧೈರ್ಯದಿಂದ ಎದುರಿಸುವುದಂತಹುದಾಗಿರಬೇಕು. ಅಂತಹ ಮನಶ್ಶಕ್ತಿಯನ್ನು ಪಡೆಯುವುದು ಹೇಗೆ? ಅದಕ್ಕೆ ಮೊದಲು ಎರಡು ದುರ್ಬಲತೆಗಳನ್ನು ಗೆಲ್ಲಬೇಕು. ಒಂದು ಮೂಢನಂಬಿಕೆ, ಎರಡು ಪ್ರಾಪಂಚಿಕತೆ ಅಥವಾ ಭೌತಿಕವಾದ. ಸ್ವಾಮಿ ವಿವೇಕಾನಂದರು ಭಕ್ತಿಯ ಹೆಸರಿನಲ್ಲಿ ಮೂಢನಂಬಿಕೆಗಳಿಗೆ ತುತ್ತಾಗುವುದನ್ನು ತೀವ್ರವಾಗಿ ಖಂಡಿಸುತ್ತಿದ್ದರು. "ಯಾವ ಮಿದುಳು ಉದಾತ್ತ, ಉಚ್ಚ ಭಾವನೆಯನ್ನು ಆಲೋಚಿಸಲಾರದೋ, ತನ್ನ ಸ್ವಂತಿಕೆಯನ್ನೆಲ್ಲ ಕಳೆದುಕೊಂಡಿದೆಯೋ, ಧರ್ಮದ ಹೆಸರಿನಲ್ಲಿರುವ ಕೆಲಸಕ್ಕೆ ಬಾರದ ಮೂಢನಂಬಿಕೆಗಳನ್ನೆಲ್ಲ ಸ್ವೀಕರಿಸುವುದರ ಮೂಲಕ ತನಗೆ ತಾನೆ ವಿಷವಿಕ್ಕುತ್ತಿದೆಯೋ ಅಂತಹ ಮಿದುಳುಳ್ಳವರ ವಿಷಯದಲ್ಲಿ ನಾವು ಬಹಳ ಜಾಗರೂಕರಾಗಿರಬೇಕು. ... ನೀವೆಲ್ಲ ಇಂತಹ ಮೂರ್ಖರಾಗಿರುವುದಕ್ಕಿಂತ ಶುದ್ಧ ನಾಸ್ತಿಕರಾಗಿರುವುದು ಮೇಲು. ಏಕೆಂದರೆ ನಾಸ್ತಿಕ ಜೀವಂತನಾಗಿರುವನು. ಅವನನ್ನು ಉತ್ತಮಪಡಿಸಲು ಸಾಧ್ಯ. ಮೂಢನಂಬಿಕೆ ಪ್ರವೇಶಿಸಿದರೆ ತಲೆಕೆಡುವುದು, ವ್ಯಕ್ತಿ ಹುಚ್ಚನಾಗುವನು. ಅವನತಿ ಪ್ರಾರಂಭವಾಗುವುದು. ಮೂಢನಂಬಿಕೆಗಳು ದೇಹದಲ್ಲಿರುವ ವ್ರಣಗಳಂತೆ, ಅವುಗಳನ್ನು ಕತ್ತರಿಸಬೇಕು, ನಾಶಮಾಡಬೇಕು. ಅದರಿಂದ ನಮ್ಮ ಸಂಸ್ಕೃತಿ, ಧರ್ಮ, ಅಧ್ಯಾತ್ಮ ನಾಶವಾಗುವುದಿಲ್ಲ. ಧರ್ಮದ ಮುಖ್ಯತತ್ತ್ವಗಳೆಲ್ಲಾ ಸುರಕ್ಷಿತವಾಗುವುವು. ಕೆಲಸಕ್ಕೆ ಬಾರದ ಈ ವ್ರಣಗಳನ್ನು ಎಷ್ಟು ಬೇಗ ತೊಡೆದು ಹಾಕಿದರೆ ಅಷ್ಟು ಒಳ್ಳೆಯದು. ಆಗ ಅಷ್ಟು ಹೆಚ್ಚಾಗಿ ಆಧ್ಯಾತ್ಮಿಕ ತತ್ತ್ವಗಳು ಪ್ರಕಾಶಿಸುವುವು. ಅವುಗಳನ್ನು ಆಶ್ರಯಿಸಿ ನಿಲ್ಲಿ " (ಕೃ.ಶ್ರೀ.೩.೧೫೨-೧೫೩).

ಹೀಗೆ ಸ್ವಾಮಿ ವಿವೇಕಾನಂದರು ಸಾಧನೆಯ ಪಥದಲ್ಲಿ ಭಕ್ತಿಜ್ಞಾನಗಳ ಸಾಮರಸ್ಯವನ್ನು ತಂದರು. 'ನಮ್ಮ ಪ್ರಸ್ತುತ ಕರ್ತವ್ಯ' ಎಂಬ ಪ್ರವಚನದಲ್ಲಿ ಈ ವಿಷಯವನ್ನು ಮತ್ತೆ ಒತ್ತಿ ಹೇಳುತ್ತ ಭಕ್ತ ಮೂಢನಾಗಿರಬಾರದು, ಜ್ಞಾನಶಕ್ತಿಯನ್ನು ಉಪಯೋಗಿಸಿ ಸರಿಯಾದ ಧರ್ಮದ ಪಥದಲ್ಲಿ ನಡೆಯಿರಿ ಎಂದು ಕರೆಕೊಡುತ್ತಾರೆ. "ಇವೆರಡರಿಂದ ಪಾರಾಗಿ. ನಮಗೆ ಬೇಕಾಗಿರುವುದು ನಿರ್ಭೀತ ಸಾಹಸಿಗಳು, ನಮಗೆ ಇಂದು ಬೇಕಾಗಿರುವುದು ರಕ್ತದಲ್ಲಿ ಪುಷ್ಟಿ, ನರಗಳಲ್ಲಿ ಶಕ್ತಿ, ಕಬ್ಬಿಣದಂತಹ ಮಾಂಸಖಂಡಗಳು, ಉಕ್ಕಿನಂತಹ ನರಗಳು. ಕೆಲಸಕ್ಕೆ ಬಾರದ ಜೊಳ್ಳು ಭಾವನೆಗಳಲ್ಲ. ಇವುಗಳನ್ನು ನಿರಾಕರಿಸಿ. ಧರ್ಮದಲ್ಲಿ ರಹಸ್ಯವಿಲ್ಲ. ವೇದ, ವೇದಾಂತ, ಸಂಹಿತೆ, ಪುರಾಣಗಳಲ್ಲಿ ಏನಾದರೂ ರಹಸ್ಯವಿದೆಯೇ? ಹಿಂದಿನ ಕಾಲದ ಋಷಿಗಳು ತಮ್ಮ ಧರ್ಮಪ್ರಚಾರಕ್ಕೆ ರಹಸ್ಯ ಸಂಸ್ಥೆಗಳನ್ನು ಸ್ಥಾಪಿಸಿದರೇನು? ರಹಸ್ಯಾಚರಣೆ ಮತ್ತು ಮೂಢನಂಬಿಕೆ ಯಾವಾಗಲೂ ದುರ್ಬಲತೆಯ ಚಿಹ್ನೆ, ಅವನತಿ ಮತ್ತು ಮೃತ್ಯುವಿನ ಚಿಹ್ನೆ"(ಕೃ.ಶ್ರೀ. ೩.೧೫೩).

ಮನಸ್ಸಿನ ದುರ್ಬಲತೆ ತಮಸ್ಸಿನ ಪ್ರತೀಕ. ಅದನ್ನು ಹೋಗಲಾಡಿಸಬೇಕಾದರೆ ಮೊದಲು ರಜಸ್ಸನ್ನು ಬೆಳೆಸಿಕೊಳ್ಳಬೇಕು. ಅಂದರೆ ಸ್ವಾಮಿ ವಿವೇಕಾನಂದರು ಜ್ಞಾನ ಭಕ್ತಿಗಳ ಜೊತೆಗೆ ಕರ್ಮಯೋಗವನ್ನು ಅನುಸರಿಸಲು ಕರೆ ಕೊಡುತ್ತಿದ್ದಾರೆಯೇ? ಎಷ್ಟು ಸುಂದರವಾಗಿ ಯೋಗಗಳ ಸಾಮರಸ್ಯವನ್ನು ತಂದಿದ್ದಾರೆ.

> ಸ್ವಾಮಿ ವಿವೇಕಾನಂದರು ಸಮನ್ವಯದ ಪ್ರತೀಕವಾಗಿ ತಮ್ಮ ಜೀವನದಲ್ಲಿ ಗೋಪಿಯರ ಪ್ರೇಮ, ಬುದ್ಧನ ನಿಃಸ್ವಾರ್ಥತೆ, ಶಂಕರರ ಜ್ಞಾನ, ಯೋಗಿಯ ಧ್ಯಾನ ಎಲ್ಲವನ್ನೂ ಸಮರಸವಾಗಿ ಪ್ರಕಟಿಸಿದರು.

## ಯೋಗಸಮನ್ವಯ ಹೊಸಧರ್ಮ

ಸ್ವಾಮೀಜಿಯವರ ಪ್ರತಿಭೆಯೆಂದರೆ ಪ್ರತಿಯೋಗದಲ್ಲೂ ಸರ್ವಸ್ವತಂತ್ರವಾದ ಸ್ವಾಯತ್ತತೆಯನ್ನು ಒತ್ತಿ ಹೇಳುತ್ತಾರೆ. ಅದರ ಜೊತೆಗೆ ಪ್ರತಿಯೋಗಮಾರ್ಗದಲ್ಲಿ ಎಲ್ಲ ಯೋಗಗಳನ್ನು ಒಂದುಗೂಡಿಸಿಕೊಂಡು ಗುರಿಯನ್ನು ಮುಟ್ಟುವುದನ್ನೂ ಎತ್ತಿ ತೋರಿಸುತ್ತಾರೆ. ಇದೇ ಯೋಗಗಳ ಸಮನ್ವಯ. ತಮ್ಮ ಕರ್ಮಯೋಗದಲ್ಲಿ ಒಂದೆಡೆ ಹೇಳುತ್ತಾರೆ : "ಈ ಪ್ರಕಾರ ಜ್ಞಾನಿಯೂ, ಕರ್ಮಿಯೂ ಭಕ್ತನೂ ಸ್ವಾರ್ಥತ್ಯಾಗವೆಂಬ ಒಂದೇ ನೆಲೆಯಲ್ಲಿ ಸಂಧಿಸುವುದನ್ನು ನೀವು ನೋಡುತ್ತೀರಿ, (ಕೃ.ಶ್ರೀ. ೧.೯೦)

ಸ್ವಾಮಿ ವಿವೇಕಾನಂದರು ಸಮನ್ವಯದ ಪ್ರತೀಕವಾಗಿ ತಮ್ಮ ಜೀವನದಲ್ಲಿ ಗೋಪಿಯರ ಪ್ರೇಮ, ಬುದ್ಧನ ನಿಃಸ್ವಾರ್ಥತೆ, ಶಂಕರರ ಜ್ಞಾನ, ಯೋಗಿಯ ಧ್ಯಾನ ಎಲ್ಲವನ್ನೂ ಸಮರಸವಾಗಿ ಪ್ರಕಟಿಸಿದರು. ಈ ಯೋಗಸಮನ್ವಯವನ್ನು ಸಾಧಿಸಿ ಸಾಕ್ಷಾತ್ಕರಿಸಿಕೊಂಡಿದ್ದ ಗುರುವಿನ ಬಳಿ ಕುಳಿತು ಅಭ್ಯಾಸ ಮಾಡುವ ಭಾಗ್ಯ ಸ್ವಾಮೀಜಿಯವರದಾಗಿತ್ತು. ತಮ್ಮ ಗುರುವಿನಲ್ಲಿ ಕಂಡಿದ್ದ ಈ ಯೋಗ ಸಮನ್ವಯ ಪ್ರಪಂಚದ ಭವಿಷ್ಯಧರ್ಮವಾಗಬೇಕೆಂದು ಆಶಿಸಿದರು. ತಮ್ಮ ಒಂದು ಪತ್ರದಲ್ಲಿ ಬರೆಯುತ್ತಾರೆ : "ಈ ಹೊಸ ಅವತಾರ ಪುರುಷರ ಉಪದೇಶವಾದರೋ, ಜ್ಞಾನ, ಭಕ್ತಿ, ಕರ್ಮ, ಯೋಗಗಳ ಒಳ್ಳೆಯ ಭಾಗಗಳೆಲ್ಲವನ್ನೂ ಸೇರಿಸಿ ಒಂದು ಹೊಸ ಸಮಾಜವನ್ನು ಸ್ಥಾಪಿಸಬೇಕು ಎಂಬುದು. ಉಳಿದ ಹಳೆಯ ಅವತಾರ ಪುರುಷರು ನಿಸ್ಸಂದೇಹವಾಗಿ ಒಳ್ಳೆಯವರೇ, ಆದರೆ ಈ ಯುಗದ ಹೊಸ ಧರ್ಮವಿದು. ಈಗ ಜ್ಞಾನ, ಭಕ್ತಿ, ಕರ್ಮ ಯೋಗಗಳ ಮಿಲನವಾಗಬೇಕು. ಚಂಡಾಲನವರೆಗೆ ಲಿಂಗ ಜಾತಿಗಳ ಭೇದಭಾವವನ್ನು ಇಟ್ಟುಕೊಳ್ಳದೆ, ಎಲ್ಲರಿಗೂ ಧರ್ಮವನ್ನು ಬೋಧಿಸಬೇಕು. ಹಳೆಯ ಅವತಾರ ಪುರುಷರು ಸರಿಯಾಗಿದ್ದರು, ಆದರೆ ಅವರೆಲ್ಲರೂ ಈಗ ಶ್ರೀರಾಮಕೃಷ್ಣರಲ್ಲಿ ಐಕ್ಯರಾಗಿರುವರು." (ಕೃ.ಶ್ರೀ. ೪.೪.೧೨)

ಪ್ರತಿಯೊಬ್ಬ ಜೀವಿಯೂ ಆತ್ಮಸಾಕ್ಷಾತ್ಕಾರದೆಡೆಗೆ, ಪೂರ್ಣತ್ವದೆಡೆಗೆ ತಿಳಿದೋ ತಿಳಿಯದೆಯೋ ನಿಧಾನವಾಗಿ ಸಾಗುತ್ತಿದ್ದಾನೆ. ಸತ್ಯನಿಷ್ಠ ಕರ್ತವ್ಯದ ಮೂಲಕ ಜ್ಞಾನಲಕ್ಷಣಗಳಾದ ಆತ್ಮಪ್ರಜ್ಞೆ ಮತ್ತು ಆತ್ಮವಿಶ್ವಾಸವುಳ್ಳವನಾಗಿ ಸಕಲಜಗತ್ತನ್ನು ಪ್ರೀತಿಸುತ್ತ ಮತ್ತು ಧ್ಯಾನದ ಮೂಲಕ ಆತ್ಮಸಂಯಮಿಯಾಗಿ ಕೊನೆಗೆ ವ್ಯಕ್ತಿಯು ಪೂರ್ಣತ್ವವನ್ನು ಪಡೆದು ವಿವೇಕಾನಂದರು ಬಯಸಿದ ಪೂರ್ಣ ಮನುಷ್ಯನಾಗುತ್ತಾನೆ. ಇದು ಯೋಗಗಳ ಸಮನ್ವಯ ಹಾಗೂ ಮನುಷ್ಯನ ವಿಭಿನ್ನ ಶಕ್ತಿಗಳ ಸಮನ್ವಯವೂ ಕೂಡ. ಇದಕ್ಕೆ ವ್ಯತಿರಿಕ್ತವಾಗಿ ಸ್ವಾರ್ಥತೆ, ಆತ್ಮಘಾತುಕತನ, ದ್ವೇಷ, ತನ್ನಲ್ಲಿ ನಂಬಿಕೆ ಇಲ್ಲದಿರುವುದು- ಇವು ಆತ್ಮವಿಕಸನಕ್ಕೆ ಬದಲಾಗಿ ಆತ್ಮಸಂಕೋಚದತ್ತ ಕೊಂಡೊಯ್ದು ವ್ಯಕ್ತಿಯು ಪೂರ್ಣ ಮನುಷ್ಯನಾಗುವುದಕ್ಕೆ ಬದಲಾಗಿ ಮೃಗವಾಗುತ್ತಾನೆ. ಆದುದರಿಂದ ಎಚ್ಚರದಿಂದಿದ್ದು, ಸ್ವಾಮೀಜಿಯವರು ಬೋಧಿಸಿರುವ ಯೋಗ ಸಮನ್ವಯವನ್ನು ಸಾಧಿಸಲು ಪ್ರಯತ್ನಿಸಿ, ಸ್ವಲ್ಪ ಜಯಗಳಿಸಿದರೂ ಜೀವನ ಧನ್ಯವಾಗುತ್ತದೆ, ಆನಂದಮಯ ವಾಗುತ್ತದೆ.

ಈ ಯೋಗಸಮನ್ವಯ ಭವಿಷ್ಯ ಧರ್ಮವಾಗಬೇಕೆಂಬ ಸತ್ ಸಂಕಲ್ಪದಿಂದ ಸ್ವಾಮಿ ವಿವೇಕಾ ನಂದರು ರಾಮಕೃಷ್ಣ ಸಂಘದ ಚಿಹ್ನೆಯಲ್ಲಿ ಈ ನಾಲ್ಕುಯೋಗಗಳನ್ನು ಸುಂದರವಾಗಿ ಚಿತ್ರಿಸಿದ್ದಾರೆ.

ಈ ಚಿತ್ರದಲ್ಲಿರುವ ನೀರಿನ ಅಲೆಗಳು ಕರ್ಮವನ್ನೂ ಕಮಲ ಪುಷ್ಪವು ಭಕ್ತಿಯನ್ನೂ ಉದಯಿಸುತ್ತಿರುವ ಸೂರ್ಯ ಜ್ಞಾನವನ್ನೂ, ಸುತ್ತಿಕೊಂಡ ಸರ್ಪ ಯೋಗವನ್ನೂ ಮತ್ತು ಜಾಗೃತವಾದ ಕುಂಡಲಿನೀ ಶಕ್ತಿಯನ್ನೂ ಹಾಗೆಯೇ ಹಂಸವು ಪರಮಾತ್ಮನನ್ನೂ ಸಾಂಕೇತಿಕವಾಗಿ ಸೂಚಿಸುತ್ತವೆ. ಈ ಚಿತ್ರದ ಅರ್ಥ ಕರ್ಮ, ಜ್ಞಾನ, ಭಕ್ತಿ ಮತ್ತು ಯೋಗಗಳ ಸಂಯೋಗದಿಂದ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯಬಹುದು ಎಂದು. □




---

ಕ್ರಿ.ಶ. ೧೮೯೯ರಲ್ಲಿ ಸ್ವಾಮೀಜಿ ತಮ್ಮ ಗುರುಭಾಯಿ ಸ್ವಾಮಿ ತುರೀಯಾನಂದರೊಡನೆ ಫ್ರಾನ್ಸಿಸ್ ಲೆಗೆಟ್‌ರ ಮನೆ ರಿಡ್ಜ್‌ಲಿ ಮ್ಯಾನರ್‌ನಲ್ಲಿ ಕೆಲವು ದಿನ ತಂಗಲು ಹೋದರು. ಎಲ್ಲರಿಗೂ ಪ್ರತ್ಯೇಕ ಕೊಠಡಿಗಳನ್ನು ಕೊಡಲಾಗಿತ್ತು. ಮುಂದಿನ ಎರಡು ಕೊಠಡಿಗಳನ್ನು ಸ್ವಾಮೀಜಿಯವರ ಉಪಯೋಗಕ್ಕೆ ಬಿಡಲಾಗಿತ್ತು. ಸ್ವಾಮಿ ತುರೀಯಾನಂದರು ಸ್ವಾಮೀಜಿಯ ಪಕ್ಕದಲ್ಲಿನ ಕೊಠಡಿಯಲ್ಲಿದ್ದರು. ಫ್ರಾನ್ಸಿಸ್ ಲೆಗೆಟ್‌ರ ಪತ್ನಿ ಅತಿಥಿಗಳ ಕೊಠಡಿಯಲ್ಲಿ ಎಲ್ಲ ಸೌಕರ್ಯಗಳು ಸರಿಯಾಗಿ ಇವೆಯೋ ಎಂದು ನೋಡಲು ಬಂದಳು. ಸ್ವಾಮಿ ತುರೀಯಾನಂದರ ಕೋಣೆಯಲ್ಲಿ ಹಾಸಿಗೆಯು ನೆಲದ ಮೇಲಿರುವುದನ್ನು ಕಂಡು "ಏಕೆ, ಸ್ವಾಮೀಜಿ, ಏನಾಯಿತು? ಹಾಸಿಗೆ ಸರಿಯಾಗಲಿಲ್ಲವೆ ? " ಎಂದು ಆಶ್ಚರ್ಯದಿಂದ ಉದ್ಗಾರವೆತ್ತಿದಳು. " ಇಲ್ಲ, ಇಲ್ಲ, ಹಾಸಿಗೆ ಚೆನ್ನಾಗಿಯೇ ಇದೆ. ಆದರೆ ನನಗೆ ಸ್ವಾಮೀಜಿಯ ಸಮಕ್ಕೆ ಮಲಗಲು ಆಗುವುದಿಲ್ಲ. ಆದ್ದರಿಂದ ಹಾಸಿಗೆಯನ್ನು ಕೆಳಗೆ ಇಳಿಸಿದ್ದೇನೆ " ಎಂದರು! ಸ್ವಾಮೀಜಿಯವರ ಬಗ್ಗೆ ಸ್ವಾಮಿ ತುರೀಯಾನಂದರ ಪ್ರೀತಿ ಆದರಗಳು ಅಮೋಘವೂ, ಅದ್ಭುತವೂ ಆಗಿತ್ತು!!

---

ಸ್ಥಳದಾನ: ಶ್ರೀಮತಿ ಮಂಜುಳಾ ಶ್ರೀನಿವಾಸ್, ಮೈಸೂರು